ಮೈಸೂರ ಗಿಜಿಟ.

ನಂ. 34 ಸರ್ಕಾರದಿಂದ ಘಾಯಿಷ್ ಆದ್ದು. ಸ್ 1884.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 23, ಸ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಟೆರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್‌ವ ಸೆಷನ್ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

1ನೇ ಭಾಗ

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 15ನೇ ಆಗಸ್ಟ್ 1884.

ನಂ. 119.—(1870ನೇ ಇಸವಿ VIIನೇ ನಂಬರ್ ಆಕ್ಟ್‌ಂಬ) ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮ್ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಮೈಸೂರು ಚೀಫ್ ಕೋರ್ಟಿನಲ್ಲಿ ವಟ್ಟ ಅಡ್ವೊಕೇಟರಾಗಿ ದಾಖಲ್ಮಾಡಲ್ಪಟ್ಟ, ಇಂಗ್ಲೆಂಡ್ ಯಾ ಐರ್‌ಲೆಂಡ್ ಕೋರ್ಟಿನ ಯಾವದಾದರೂ ಇಗಳ ಬ್ಯಾರಿಸ್ಟರ್–ಅಟ್–ಲಾ ಯವರುಗಳಿಂದಲಾಗಲಿ, ಸ್ಕಾಟ್‌ಲೆಂಡಿನ ಫ್ಯಾಕಲ್ಟಿ ಆಫ್ ಅಡ್ವೊಕೇಟ್ಸ್ ಯೆಂಬದರ ಯಾವ ಮೆಂಬರ್‌ನಿಂದಾಗಲಿ, ಮೈಸೂರು ದೇಶದಲ್ಲಿನ ಕೋರ್ಟುಗಳಲ್ಲಿ ದಾಖಲ್ಮಾಡಲ್ಪಡುವ ವಕಾಲತ್‌ನಾಮೆಗಳ ಮೇಲೆ, ಸದರೀ ಆಕ್ಟಿನ IIನೇ ಷೆಡ್ಯೂಲ್ 10ನೇ ಕಲಂ ಅನುಸರಿಸಿ ವಸೂಲಾತೀಮಾಡಲ್ಪಡಬೇಕಾದ ಫೀಜು ಪೂರ್ತಿಯಾಗಿ ಮಾಫಾಗತಕ್ಕದ್ದು.

ಕೆ. ಕೇಷವಾದ್ರಿಅಯ್ಯರ್,
ದಿವಾನ್.